# ಕಳೆದುಹೋಯಿತೆ ಮೊಬೈಲ್ ಬಿಡಿ ಡೇಟಾ ಸೋರಿಕೆಯ ಭಯ




**ಜನಸಂದಣಿಯಲ್ಲಿದ್ದಾಗ ಮೊಬೈಲ್ ಕಳೆದುಹೋದರೆ ಅಥವಾ ಕಳ್ಳತನವಾದರೆ ಆ ಕ್ಷಣಕ್ಕೆ ಅದನ್ನು ಪತ್ತೆ ಮಾಡಲು ಹಾಗೂ ಅದರಲ್ಲಿನ ಮಹತ್ವದ ಮಾಹಿತಿಯು ದುರ್ಬಳಕೆಯಾಗದಂತೆ ತಡೆಯಲು ಗೂಗಲ್ 'ಫೈಂಡ್ ಮೈ ಡಿವೈಸ್' ತಂತ್ರಾಂಶ ರೂಪಿಸಿದೆ. ಅದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲಿದೆ.**

**■ ಶಶಿಕುಮಾರ್ ಸಿ.**

ಮರೆವು, ಕೆಲಸದೊತ್ತಡ, ನಿರ್ಲಕ್ಷ್ಯ, ಕಳವು – ಹೀಗೆ ಒಂದಿಲ್ಲೊಂದು ಕಾರಣಗಳಿಂದ ಸಾಕಷ್ಟು ಮಂದಿ ಮೊಬೈಲ್‌ಗಳನ್ನು ಕಳೆದುಕೊಳ್ಳುತ್ತಾರೆ. ಮೊಬೈಲ್ ಹೋದ ದುಃಖ ಒಂದೆಡೆಯಾದರೆ, ಅದರಲ್ಲಿನ ಮಹತ್ವದ ಡೇಟಾ ಹಾಗೂ ಖಾಸಗಿ ಮಾಹಿತಿ ದುರ್ಬಳಕೆ ಆಗಬಹುದೆನ್ನುವ ಆತಂಕ ಮತ್ತೊಂದೆಡೆ. ಇಂತಹ ಸಂದರ್ಭಗಳಲ್ಲಿ ಕಳೆದುಹೋದ ಮೊಬೈಲ್ ಸುಲಭವಾಗಿ ಸಿಗುವ ಸಾಧ್ಯತೆ ಕಡಿಮೆ. ಹಾಗೆ ಸಿಕ್ಕರೆ ಅದು ಅದೃಷ್ಟವೇ ಸರಿ.

ಸ್ಮಾರ್ಟ್‌ಫೋನ್ ಬಳಕೆದಾರರ ಬಹುದೊಡ್ಡ ಸಮಸ್ಯೆಗಳಲ್ಲೊಂದು ನಾಪತ್ತೆಯಾದ ಮೊಬೈಲ್ ಮತ್ತೆ ಕೈಗೆ ಸುಲಭವಾಗಿ ಸಿಗದಿರುವುದು. ಹೀಗಾಗಿ, ಗೂಗಲ್ ಕಂಪನಿಯು 'ಫೈಂಡ್ ಮೈ ಫೋನ್' ಫೀಚರ್ ಬಿಡುಗಡೆ ಮಾಡಿದೆ. ಆ್ಯಪ್ ಸಹ ಇದೆ. ನಾಪತ್ತೆಯಾದ ಮೊಬೈಲ್ ಪತ್ತೆಗೆ ಇದು ಸಹಕಾರಿ. ಅದಕ್ಕಾಗಿ ಮೊಬೈಲ್‌ನಲ್ಲಿ ಅಂತರ್ಜಾಲ ಹಾಗೂ ಮೊಬೈಲ್ ಸ್ವಿಚ್ಡ್ ಆನ್ ಆಗಿರಬೇಕು.

### ಕೂಡಲೇ ಹೀಗೆ ಮಾಡಿ

ಒಂದು ವೇಳೆ ಮೊಬೈಲ್ ನಾಪತ್ತೆಯಾದರೆ, ಕಳೆದುಹೋದರೆ ಕೂಡಲೇ ಮೊಬೈಲ್‌ಗೆ ಲಾಗಿನ್ ಆದ ಮೇಲ್ ಐಡಿಯಿಂದಲೇ ಕಂಪ್ಯೂಟರ್ ಅಥವಾ ಬೇರೊಂದು ಮೊಬೈಲ್‌ನಿಂದ ಗೂಗಲ್ ಅಕೌಂಟ್‌ಗೆ ಲಾಗಿನ್ ಆಗಿ.

ಬಳಿಕ 'ಫೈಂಡ್ ಮೈ ಡಿವೈಸ್' ಟೈಪ್ ಮಾಡಿ ಸರ್ಚ್ ಮಾಡಿ. ಗೂಗಲ್ ಮ್ಯಾಪ್ ಸಹಿತವಾಗಿ ನಿಮ್ಮ ಮೊಬೈಲ್ ಹೆಸರು, ಅದು ಇರುವ ಜಾಗ, ಯಾವ ನೆಟ್‌ವರ್ಕ್‌ನಿಂದ ಕನೆಕ್ಟ್ ಆಗಿದೆ, ಕಡೆಯ ಬಾರಿಗೆ ಮೊಬೈಲ್ ಚೆಕ್ ಮಾಡಿದ್ದು ಯಾವಾಗ ಹಾಗೂ ಬ್ಯಾಟರಿ ಸಾಮರ್ಥ್ಯ (ಪರ್ಸೆಂಟೇಜ್) ಎಷ್ಟಿದೆ ಎಂಬ ಮಾಹಿತಿ ಪರದೆ ಮೇಲೆ ತೆರೆದುಕೊಳ್ಳುತ್ತದೆ. ಮೊಬೈಲ್ ಎಲ್ಲಿದೆ ಎಂಬುದು ನಿಖರವಾಗಿ ತಿಳಿಯುತ್ತದೆ.

ಇದರ ಹೊರತಾಗಿಯೂ ಪ್ಲೇ ಸೌಂಡ್, ಸೆಕ್ಯೂರ್ ಡಿವೈಸ್ ಹಾಗೂ ಎರೇಸ್ ಡಿವೈಸ್ ಎಂಬ ಮೂರು ಆಪ್ಷನ್‌ಗಳು ಲಭ್ಯ. ಇವುಗಳಿಂದ ಮೊಬೈಲ್ ಬಗ್ಗೆ ಮತ್ತಷ್ಟು ಮಾಹಿತಿ ತಿಳಿಯಬಹುದು.




ರಿಕವರಿ ಮೆಸೇಜ್ ಚಿತ್ರ




### ಪ್ಲೇ ಸೌಂಡ್

ಪ್ಲೇ ಸೌಂಡ್ ಆಪ್ಷನ್ ಕ್ಲಿಕ್ ಮಾಡಿದೊಡನೆ ಸತತವಾಗಿ ಐದು ನಿಮಿಷದವರೆಗೆ ನಿಮ್ಮ ಮೊಬೈಲ್ ರಿಂಗ್ ಆಗುತ್ತಲೇ ಇರುತ್ತದೆ. ಜನಸಂದಣಿಯಲ್ಲಿದ್ದಾಗ ಮೊಬೈಲ್ ಏನಾದರೂ ಕಳೆದುಹೋದರೆ ಕೂಡಲೇ 'ಪ್ಲೇ ಸೌಂಡ್' ಮೂಲಕ ಮೊಬೈಲ್ ಪತ್ತೆಹಚ್ಚಬಹುದು. ಮೊಬೈಲ್ ಸೈಲೆಂಟ್ ಹಾಗೂ ವೈಬ್ರೇಟ್ ಮೋಡ್‌ನಲ್ಲಿದ್ದರೂ ಮೊಬೈಲ್ ರಿಂಗ್ ಆಗುತ್ತಲೇ ಇರುತ್ತದೆ.

### ಸೆಕ್ಯೂರ್ ಡಿವೈಸ್

ಈ ಆಪ್ಷನ್ ಕ್ಲಿಕ್ಕಿಸಿ ರಿಕವರಿ ಮೆಸೇಜ್ ಮೂಲಕ ಸಂದೇಶ ಹಾಗೂ ಪರ್ಯಾಯ ಮೊಬೈಲ್ ಸಂಖ್ಯೆ ನಮೂದಿಸಿ ಸೆಕ್ಯೂರ್ ಡಿವೈಸ್ ಕ್ಲಿಕ್ ಮಾಡಿದರೆ ಕಳೆದುಹೋದ ಮೊಬೈಲ್‌ಗೆ ಈ ಮಾಹಿತಿ ರವಾನೆಯಾಗುತ್ತದೆ. ಅಲ್ಲದೇ ಮೊಬೈಲ್ ಅನ್ನು ಲಾಕ್ ಮಾಡಬಹುದು. ಹೀಗೆ ಮಾಡುವುದರಿಂದ ಜಿ–ಮೇಲ್‌ನ ಮಾಹಿತಿ ಸೋರಿಕೆಯಾಗುವುದನ್ನು ತಡೆಯಬಹುದು.

### ಎರೇಸ್ ಡಿವೈಸ್

ಈ ಮೇಲಿನ ಎರಡೂ ಪ್ರಯತ್ನಗಳ ಬಳಿಕವೂ ಮೊಬೈಲ್ ಸಿಗದಿದ್ದರೆ ಅನಿವಾರ್ಯವಾಗಿ ಎರೇಸ್ ಡಿವೈಸ್ ಆಪ್ಷನ್ ಬಳಕೆ ಮಾಡಬಹುದು. ಎರೇಸ್ ಡಿವೈಸ್ ಆಯ್ಕೆ ಕ್ಲಿಕ್ಕಿಸಿದರೆ ನಿಮ್ಮ ಮೊಬೈಲ್‌ನಲ್ಲಿರುವ ಎಲ್ಲ ಡೇಟಾ ಡಿಲೀಟ್ ಆಗುತ್ತದೆ. ಒಮ್ಮೆ ಡೇಟಾ ಎರೇಸ್ ಆದ ಬಳಿಕ ಯಾವುದೇ ಕಾರಣಕ್ಕೂ ಮತ್ತೆ ಅದನ್ನು ಮರುಪಡೆಯಲು ಸಾಧ್ಯವಿಲ್ಲ. ನಿಮ್ಮ ಡೇಟಾ ದುರ್ಬಳಕೆ ಆಗುವುದನ್ನು ಈ ಮೂಲಕ ತಡೆಗಟ್ಟಬಹುದು.

### ಮತ್ತೊಂದು ಮಾರ್ಗವೂ ಉಂಟು!

ಪ್ಲೇ ಸೌಂಡ್, ಸೆಕ್ಯೂರ್ ಡಿವೈಸ್ ಹಾಗೂ ಎರೇಸ್ ಡಿವೈಸ್ ಮಾರ್ಗಗಳಿಂದಲೂ ಮೊಬೈಲ್ ಹುಡುಕಾಟ ಸಫಲವಾಗದಿದ್ದರೂ ಮತ್ತೊಂದು ಮಾರ್ಗವುಂಟು. android.comಗೆ ಭೇಟಿ ನೀಡಿ, ಕಳೆದುಹೋದ ಮೊಬೈಲ್‌ಗೆ ಲಾಗಿನ್ ಆಗಲು ಬಳಸಿದ ಗೂಗಲ್ ಅಕೌಂಟ್‌ನಿಂದಲೇ ಮತ್ತೊಮ್ಮೆ ಲಾಗಿನ್ ಆಗಿ. ಒಂದೇ ಅಕೌಂಟ್‌ನಿಂದ ಒಂದಕ್ಕಿಂತ ಹೆಚ್ಚಿನ ಸ್ಮಾರ್ಟ್‌ಫೋನ್‌ಗಳನ್ನು ಬಳಸುತ್ತಿದ್ದರೆ ಕಳೆದು ಹೋದ ಮೊಬೈಲ್ ಅನ್ನು ಆಯ್ಕೆ ಮಾಡಿಕೊಳ್ಳಿ. ಬಳಿಕ ನಿಮಗೆ ಕಡೆಯ ಬಾರಿಗೆ ಅಂತರ್ಜಾಲದೊಂದಿಗೆ ಸಂಪರ್ಕ ಹೊಂದಿದ ಲೊಕೇಷನ್ ಲಭ್ಯವಾಗುತ್ತದೆ.

ಮೊಬೈಲ್‌ಗೆ ಪಿನ್, ಪಾಸ್‌ವರ್ಡ್ ಹಾಗೂ ಸ್ಕ್ರೀನ್ ಲಾಕ್ ಮಾಡದಿದ್ದರೆ 'ಎನೇಬಲ್ ಲಾಕ್ ಆ್ಯಂಡ್ ಎರೇಸ್' ಆಪ್ಷನ್ ಕ್ಲಿಕ್ಕಿಸುವ ಮೂಲಕ ಪಿನ್, ಪಾಸ್‌ವರ್ಡ್ ಹಾಗೂ ಸ್ಕ್ರೀನ್ ಲಾಕ್ ಮುಖಾಂತರ ಕಳೆದುಹೋದ ಮೊಬೈಲ್ ಅನ್ನು ಶಾಶ್ವತವಾಗಿ ಲಾಕ್ ಮಾಡಬಹುದು.

ಹೀಗೆ ಮಾಡುವುದರಿಂದ ಮೊಬೈಲ್ ಸಿಗದಿದ್ದರೂ ಅದರಲ್ಲಿನ ಅತ್ಯಮೂಲ್ಯ ಮಾಹಿತಿ ಸೋರಿಕೆಯಾಗಿ ದುರ್ಬಳಕೆ ಆಗುವುದನ್ನು ತಡೆಗಟ್ಟಬಹುದು. ■